ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 292/2020

ಸಿ ಡಬ್ಲ್ಯೂ-12

ಪಿ ಡಬ್ಲ್ಯೂ- 11

ದಿಃ 15-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಅಶೋಕ ತಳದಪ್ಪನವರ

ತಂದೆಯ ಹೆಸರುಃ ದೇವಪ್ಪ

ವಯಸ್ಸುಃ 59 ವರ್ಷ

ಉದ್ಯೋಗಃ ಎ.ಎಸ್.ಐ

ವಿಳಾಸಃ ಹಳಿಯಾಳ

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದಃ

ನಾನು 2012 ರಿಂದ 2021 ರವರೆಗೆ ಅಂಕೋಲಾ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 12-08-2018 ರಂದು ಮಧ್ಯಾಹ್ನ 2.30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ನಂ.253/2018 ರಂತೆ ಕಲಂ 353,504,506 ಐಪಿಸಿ ನೆದ್ದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ನೀವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-3 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3ಬಿ

ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-15 ಸಾಕ್ಷಿಯ ಸಹಿಯನ್ನು ನಿಪಿ-15ಎ ಎಂದು ಗುರುತಿಸಲಾಯಿತು.

3. ದಿಃ12-08-2018 ರಂದು ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಜಾಗದ ಮೇರೆಗೆ ಮಧ್ಯಾಹ್ನ 4 ರಿಂದ 4.45 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಯು ನಿಪಿ-11 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11ಡಿ ಎಂದು ಗುರುತಿಸಲಾಯಿತು.

4. ಅದೇ ದಿನ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಮುಖ್ಯ ದ್ವಾರದ ಹತ್ತಿರ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ-7 ರವರು ಜಾಗವನ್ನು ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 5 ರಿಂದ 5.45 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಯು ನಿಪಿ-9 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9ಡಿ ಎಂದು ಗುರುತಿಸಲಾಯಿತು. ಅದೇ ದಿನ ಬಸ್ ನಿಲ್ದಾಣದ ಒಳಗಡೆ ಇನ್ನೊಂದು ಪಂಚನಾಮೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸಂಜೆ 6 ರಿಂದ 6.45 ಗಂಟೆಯವರೆಗ ಜರುಗಿಸಲಾಯಿತು. ಸಾಕ್ಷಿಯು ನಿಪಿ-4 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4ಡಿ ಎಂದು ಗುರುತಿಸಲಾಯಿತು.

5. ದಿಃ13-08-2018 ರಂದು ಮಾನ್ಯ ವಿಭಾಗಾಧಿಕಾರಿ, ಎನ್ ಡಬ್ಲ್ಯೂ ಕೆ ಎಸ್ ಆರ್ ಟಿ ಸಿ, ಶಿರಸಿ ಇವರಿಗೆ ಚಾಸಾ-1,6 ರಿಂದ 8 ರವರು ಘಟನಾ ದಿನದಂದು ಕರ್ತವ್ಯದಲ್ಲಿ ಇದ್ದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ನೀಡುವಂತೆ ನೀವೇದಿಸಿಕೊಂಡಿರುತ್ತೇನೆ. ದಿಃ28-08-2018 ರಂದು ಎನ್ ಡಬ್ಲ್ಯೂ ಕೆ ಎಸ್ ಆರ್ ಟಿ ಸಿ ಇವರು ನೀಡಿದ ಮಾಹಿತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ-1 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು.

6. ದಿಃ12-08-2018 ರಂದು ಚಾಸಾ-6 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ28-08-2018 ರಂದು ಎನ್ ಡಬ್ಲ್ಯೂ ಕೆ ಎಸ್ ಆರ್ ಟಿ ಸಿ, ಶಿರಸಿ ಇವರು ಆರೋಪಿಯು ಪ್ರಕರಣದಲ್ಲಿ ಭಾಗಿಯಾಗಿರುವ ಕುರಿತು ನೀಡಿದ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-2 ರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ದಿಃ28-08-2018 ರಂದು ಚಾಸಾ-1,6 ಮತ್ತು 7 ರವರು ದಿಃ12-08-2018 ರಂದು ಅಂಕೋಲಾ ಘಟಕದಲ್ಲಿ ಕರ್ತವ್ಯದಲ್ಲಿ ಇದ್ದ ಬಗ್ಗೆ ಹಾಜರಾತಿಯ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-5 ರಿಂದ 7 ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-5ಬಿ, 6ಬಿ, ನಿಪಿ-7ಎ ಎಂದು ಗುರುತಿಸಲಾಯಿತು. ದಿಃ08-09-2018 ರಂದು ಮಧ್ಯಾಹ್ನ 12 ಗಂಟೆಗೆ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ಆರೋಪಿತನು ನಿರೀಕ್ಷಣಾ

ಜಾಮೀನು ಪಡೆದುಕೊಂಡು ಬಂದು ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ಮಾಡಿ, ದಸ್ತಗಿರಿ ನಿಮಯವನ್ನು ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಆರೋಪಿಯನ್ನು ಬಿಡುಗಡೆಗೊಳಿಸಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ಗುರುತಿಸುತ್ತಾರೆ.

7. ದಿಃ17-10-2019 ರಂದು ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನಿವೇದಿಸಿಕೊಂಡಿರುತ್ತೇನೆ.

( ಆರೋಪಿ ಪರ ವಕೀಲರು ಸಾಕ್ಷಿಯು ಕಡತವನ್ನು ಬಿಟ್ಟು ಪುಟ್ ನೋಟ್ಸನ್ನು ನೋಡಿ ಸಾಕ್ಷಿ ನುಡಿಯುತ್ತಿದ್ದರಿಂದ ತಕರಾರನ್ನು ಎತ್ತಿದ್ದು, ಸರಕಾರಿ ಅಭಿಯೋಜಕರು ಕರ್ನಾಟಕ ಪೊಲೀಸ್ ಮ್ಯಾನುವಲ್ ಪ್ರಕಾರ ಪುಟ್ ನೋಟ್ಸನ್ನು ನೋಡಿ ಹೇಳಲು ಅವಕಾಶ ಇರುತ್ತದೆ ಎಂದು ಹೇಳಿದ್ದು, ಉಭಯತರ ಸದರಿ ವಾದವನ್ನು ಮುಖ್ಯ ವಾದವನ್ನು ಆಲಿಸುವ ಸಂದರ್ಭದಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.)

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್.ಎನ್ ಇವರಿಂದಃ

8. ಈ ಪ್ರಕರಣದಲ್ಲಿ ಫಿರ್ಯಾದನ್ನು ಪಡೆದುಕೊಂಡವರು ನೀವೇ ಹಾಗೂ ತನಿಖೆಯನ್ನೂ ಸಹ ನೀವೇ ಮಾಡಿರುತ್ತೀರಿ ಎಂದರೆ ಸರಿ. ಆ ಸಂದರ್ಭದಲ್ಲಿ ಅಂಕೋಲಾ ಪೊಲೀಸ್ ಠಾಣೆಯಲ್ಲಿ ನಿಮಗಿಂತ ಮೇಲಾಧಿಕಾರಿಗಳು ಇದ್ದರು ಎಂದರೆ ಸರಿ. ಈ ಪ್ರಕರಣದಲ್ಲಿ ನೀವು ದೋಷಾರೋಪಣಾ ಪಟ್ಟಿಯನ್ನು ಸುಮಾರು ಒಂದು ವರ್ಷದ ನಂತರ ಸಲ್ಲಿಸಿರುತ್ತೀರಿ ಎಂದರೆ

ಸರಿ.  ದೋಷಾರೋಪಣಾ ಪಟ್ಟಿಯ ಪ್ರಕರಣ ಸಂಕ್ಷಿಪ್ತ ಪ್ರಕರಣದ ವಿವರದಲ್ಲಿ ಪೋನ್ ನಂಬರ ಪಿರ್ಯಾದಿ ಮತ್ತು ಆರೋಪಿಗೆ ಸಂಬಂಧಿಸಿದ್ದು ಇರುತ್ತದೆ ಎಂದು ನಮೂದಾಗಿರುವುದು ಸರಿಯಾಗಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಮೊಬೈಲ್ ನಂಬರುಗಳು ಯಾವ ಕಂಪನಿಗೆ ಸಂಬಂಧಪಟ್ಟಿದ್ದು ಎಂದು ತನಿಖೆಯನ್ನು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮೋಬೈಲ್ ನಂಬರುಗಳು ಯಾರಿಗೆ ಸಂಬಂಧಪಟ್ಟಿರುತ್ತವೆ ಎಂದು ಗೊತ್ತಾಗಬೇಕಾಗದರೆ ಮೊಬೈಲ್ ನಂಬರಿನ ಕಂಪನಿಗೆ ಮನವಿಯನ್ನು ಸಲ್ಲಿಸಿ ವಿವರನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ.   ನೀವೇನಾದರೂ ಕಂಪನಿಗೆ ಮನವಿಯನ್ನು ಕೊಟ್ಟಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಕರೆ ಬಂದಿರುತ್ತದೆ ಎಂದು ತಿಳಿದುಕೊಳ್ಳಲು ಮನವಿಯನ್ನು ಏನಾದರೂ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ನೀವು ತೋರಿಸಿದ ದಾಖಲಾತಿಯು ಯಾರಿಗೆ ಸಂಬಂಧಪಟ್ಟಿದ್ದು ಮತ್ತು ಮೊಬೈಲ್ ನಂಬರುಗಳ ಕರೆಗಳು ಯಾರಿಗೆ ವರ್ಗಾವಣೆಯಾಗಿರುತ್ತವೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ನನಗೆ ಸರಿಯಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

9. ಈಗ ನೀವು ತೋರಿಸಿದ ದಾಖಲೆಯು ಯಾವ ದಾಖಲೆಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಯಾವ ದಿನಾಂಕದಂದು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ. ನೀವು ಯಾವ ಕಾರಣಕ್ಕಾಗಿ ಸದರಿ ದಾಖಲಾತಿಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು

ಮೇಲಾಧಿಕಾರಿಗಳು ಕಳುಹಿಸಿಕೊಟ್ಟಿದ್ದರಿಂದ ನಾನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನೀವೆ ಸಂಪೂರ್ಣವಾಗಿ ತನಿಖೆಯನ್ನು ಮಾಡಿದ್ದೀರಿ ಎಂದು ಹೇಳುತ್ತೀರೋ ಅಥವಾ ನಿಮ್ಮ ಮೇಲಾಧಿಕಾರಿಗಳು ಮಾಡಿರುತ್ತಾರೆ ಎಂದು ಹೇಳುತ್ತೀರೋ ಎಂದರೆ ಸಾಕ್ಷಿಯು ನಾನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯಿಂದ ಫಿರ್ಯಾದಿಗೆ ಹಾಗೂ ಫಿರ್ಯಾದಿಯಿಂದ ಆರೋಪಿಗೆ ಕರೆ ಹೋಗಿದ್ದರ ಬಗ್ಗೆ ನೀವೇನಾದರೂ ತನಿಖೆಯನ್ನು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತನಿಖಾವಧಿಯಲ್ಲಿ ಕರ್ತವ್ಯದ ಹಾಜರಾತಿ ಪುಸ್ತಕವನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ–6 ಮತ್ತು 7 ರವರು ಆ ದಿನದಂದು ಕರ್ತವ್ಯಕ್ಕೆ ಹಾಜರಿದ್ದರು ಎಂಬ ಬಗ್ಗೆ ತನಿಖೆಯನ್ನು ಏನಾದರೂ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬಸ್ ಡಿಪೋದಲ್ಲಿ ಭದ್ರತಾ ಕೊಠಡಿ ಎಲ್ಲಿ ಇರುತ್ತದೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಮುಖ್ಯ ಗೇಟಿನ ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ಭದ್ರತಾ ಕೊಠಡಿಯ ಭದ್ರತಾ ಗೇಟಿನ ಹತ್ತಿರ ಚಲನವಲನ ರಜಿಸ್ಟರ್ ಇಟ್ಟಿರುತ್ತಾರೆ ಅದನ್ನು ನೀವೇನಾದರೂ ಪರಿಶೀಲನೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ದಿನ ಯಾರು ಯಾರು ಕರ್ತವ್ಯಕ್ಕೆ ಹಾಜರಿದ್ದರು ಎಂದು ತಿಳಿದುಕೊಳ್ಳಲು ಚಲನವಲನ ರಜಿಸ್ಟರನ್ನು ನೋಡಬೇಕು ಎಂದು ನಿಮ್ಮ ತನಿಖೆಯಲ್ಲಿ ಅನಿಸಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತನಿಖಾವಧಿಯಲ್ಲಿ ಆ ದಿನ ಆರೋಪಿಯು ಬಸ್ ಡಿಪೋದಲ್ಲಿ ಹಾಜರಿದ್ದರು ಎಂಬುದರ ಕುರಿತಾಗಿ ರಜಿಸ್ಟರನ್ನು ಪರಿಶೀಲನೆ ಮಾಡಿ ದೃಡಪಡಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಪಿರ್ಯಾದಿಯವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಕೇವಲ

ಫಿರ್ಯಾದಿಯವರ ಹೇಳಿಕೆಯ ಮೇರೆಗೆ ಆರೋಪಿಯು ಅಲ್ಲಿ ಹಾಜರಿದ್ದನು ಎಂದು ಭಾವಿಸಿಕೊಂಡದ್ದನ್ನು ಬಿಟ್ಟರೆ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿ ದೃಢಪಡಿಸಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ತನಿಖೆಯಲ್ಲಿ ಆರೋಪಿಯು ಆ ದಿನ ಡಿಪೋದಲ್ಲಿ ಹಾಜರಿದ್ದನು ಎಂಬ ಬಗ್ಗೆ ತನಿಖೆಯನ್ನು ಮಾಡುವುದು ಅವಶ್ಯಕವಾಗಿತ್ತು ಎಂದರೆ ಸರಿ. ಆರೋಪಿಯು ಆ ದಿನದಂದು ಹಾಜರಿಸಿದ್ದನು ಎಂಬುದರ ಬಗ್ಗೆ ಕುರಿತಾಗಿ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡದ ಕಾರಣ ನೀವು ಈ ಪ್ರಕರಣದಲ್ಲಿ ಸರಿಯಾಗಿ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತನಿಖೆಯನ್ನು ಮಾಡಿದ್ದೇನೆ ಎಂದು ನುಡಿಯುತ್ತಾರೆ. ನೀವು ಬಸ್ ಡಿಪೋಗೆ ಹೋದಂತಹ ಸಂದರ್ಭದಲ್ಲಿ ಭದ್ರತಾ ಕೊಠಡಿಯ ಹತ್ತಿರ ಎಲ್ಲೆಲ್ಲಿ ಸಿ.ಸಿ ಟಿವಿ ಇರುತ್ತದೆ ಎಂದು ಪರಿಶೀಲನೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಬಸ್ ನಿಲ್ದಾಣದ ಮುಖ್ಯ ದ್ವಾರದ ಹತ್ತಿರ ಇದ್ದಂತಹ ಸಿಸಿ ಟಿವಿ ಫುಟೇಜನ್ನು ತೆಗೆದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಾರುಪತ್ಯಗಾರರ ಕೊಠಡಿಯು ಭದ್ರತಾ ಗೇಟಿನ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ಚಾಸಾ–7 ರವರ ಕೊಠಡಿ ಎಲ್ಲಿ ಬರುತ್ತದೆ ಎಂದು ಹೇಳಲು ಬರುತ್ತಾ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲಾತಿಗಳನ್ನು ನೋಡಿ ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಹೋದಂತಹ ಸಂದರ್ಭದಲ್ಲಿ ಭದ್ರತಾ ಗೇಟಿಗೆ ಮುಂದೆ ಇದ್ದಂತಹ ಎಷ್ಟು ಸಿಬ್ಬಂದಿಗಳನ್ನು ವಿಚಾರಣೆಯನ್ನು ಮಾಡಿರುತ್ತೀರಿ ಎಂದರೆ ಸಾಕ್ಷಿಯು ಯಾರನ್ನೂ ಸಹ ತನಿಖೆಯನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಭದ್ರತಾ

ಗೇಟನ್ನು ದಾಟಿಕೊಂಡು ಬಸ್ ಡಿಪೋ ಒಳಗಡೆ ಹೋಗಬೇಕಾಗುತ್ತದೆ ಎಂದರೆ ಸರಿ. ಬಸ್ ಡಿಪೋ ಒಳಗಡೆ ಹೋಗಬೇಕಾದರೆ ಭದ್ರತಾ ಸಿಬ್ಬಂದಿಗಳಿಂದ ಆರೋಪಿಯು ಒಳಗಡೆ ಹೋಗಿರುತ್ತಾನಾ ಅಥವಾ ಇಲ್ಲವಾ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರಥಮ ವರ್ತಮಾನ ವರದಿಯಲ್ಲಿ ನೀವು ಜನರಲ್ ಡೈರಿ ಉಲ್ಲೇಖ ಸಂಖ್ಯೆಯನ್ನೂ ಸಹ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ-1,6 ಮತ್ತು 7 ರವರ ಕೊಠಡಿಯ ಹತ್ತಿರ ಸಿ ಸಿ ಟಿವಿಯನ್ನು ಅಳವಡಿಸಿರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ವಿಷಯವನ್ನು ಯಾವ ರೀತಿಯ ಆಧಾರದ ಮೇಲೆ ಇಲ್ಲ ಎಂದು ಹೇಳುತ್ತೀರಿ ಎಂದರೆ ಸಾಕ್ಷಿಯು ನನಗೆ ನೆನಪಿದ್ದು, ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಮೂರು ಜನರ ಕೊಠಡಿಯ ಹತ್ತಿರ ಸಿಸಿ ಟಿವಿಯನ್ನು ಅಳವಡಿಸಿದ್ದು ಗೊತ್ತಿದ್ದರೂ ಸಹ ಅದನ್ನು ಪರಿಶೀಲನೆ ಮಾಡಿದರೆ ಆರೋಪಿಯು ಯಾವುದೇ ಜಗಳವನ್ನು ಮಾಡಿರುವುದಿಲ್ಲ ಎಂದು ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ನಿಮ್ಮ ತನಿಖೆಯಲ್ಲಿ ಮುಚ್ಚಿಟ್ಟಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ-1 ರವರ ರೂಂ ನಿಂದ ಯಾವ ದಿಕ್ಕಿಗೆ ಚಾಸಾ-7 ರವರ ಕೊಠಡಿ ಬರುತ್ತದೆ ಎಂದು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಚಾಸಾ-6 ರವರ ಕೊಠಡಿಯು ಚಾಸಾ-7 ರವರ ಕೊಠಡಿಯಿಂದ ಎಷ್ಟು ದೂರು ಹಾಗೂ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ಹೇಳಲು ಬರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

10. ನಿಮ್ಮ ಪ್ರಕಾರ ನಿಪಿ–4 ಪಂಚನಾಮೆಯನ್ನು ಎಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅಂಕೋಲಾದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಕಂಟ್ರೋಲರ ಕುಳಿತುಕೊಳ್ಳುವ ಜಾಗದ ಎದುರುಗಡೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–4 ರಲ್ಲಿ ದಿಃ12–08–2018 ರಂದು ಅಂಕೋಲಾ ತಾಲೂಕಿನ ಕೆ ಎಸ್ ಆರ್ ಟಿ ಸಿ ಬಸ್ ಡಿಪ್ಪೋದಲ್ಲಿ ಈ ಕೆಳಗೆ ಸಹಿ ಮಾಡಲಿರುವ ಪಂಚರಾದ ನಾವು ಹೇಳಿ ಬರೆಯಿಸಿದ ಪಂಚನಾಮೆ ಎಂದು ನಮೂದು ಮಾಡಿದ್ದು, ಅದು ಸರಿಯಾಗಿ ಇರುತ್ತದೆ ಎಂದು ಹೇಳುತ್ತೀರಾ ಅಥವಾ ಅದನ್ನು ತಿದ್ದುಪಡಿ ಏನಾದರೂ ಮಾಡಲು ಪ್ರಯತ್ನ ಏನಾದರೂ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮಿಸ್ಟೇಕ್ ಆಗಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಪೂರ್ವದಲ್ಲಿ ನೀವು ಪಡೆದುಕೊಂಡ ಎಲ್ಲ ದಾಖಲಾತಿಗಳನ್ನು ಓದಿ ನೋಡಿರುತ್ತೀರಾ ಅಥವಾ ಇಲ್ಲವಾ ಎಂದರೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ ಸದರಿ ಮೂರು ಪಂಚನಾಮೆಯ ದಾಖಲಾತಿಗಳನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಬಸ್ ಡಿಪ್ಪೋದಲ್ಲಿ ಕುಳಿತುಕೊಂಡು ಪಂಚನಾಮೆಯನ್ನು ಬರೆದರೆ ಬಸ್ ನಿಲ್ದಾಣ ಕಾಣಿಸುವುದಿಲ್ಲ ಎಂದರೆ ಸರಿ. ಬಸ್ ಡಿಪ್ಪೋದಿಂದ ಬಸ್ ನಿಲ್ದಾಣ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ಒಂದು ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ನೀವು ಬಸ್ ನಿಲ್ದಾಣ ಈಗ ಹೊಸದಾಗಿ ಮಾಡಿದ ನಂತರ ಪಂಚನಾಮೆಯನ್ನು ಮಾಡಿರುತ್ತೀರೋ ಅಥವಾ ಪೂರ್ವದಲ್ಲಿ ಮಾಡಿರುತ್ತೀರೋ ಎಂದರೆ ಸಾಕ್ಷಿಯು ಹಳೆ ಬಸ್ ನಿಲ್ದಾಣ ಇದ್ದಾಗ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಹಳೆ ಬಸ್ ನಿಲ್ದಾಣ ಇದ್ದಾಗ ಕಂಟ್ರೋಲರ್ ಕೊಠಡಿಯು ಯಾವ ದಿಕ್ಕಿನಲ್ಲಿ ಇತ್ತು ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು

ನುಡಿಯುತ್ತಾರೆ. ಉತ್ತರ ಅಥವಾ ದಕ್ಷಿಣ ದಿಕ್ಕಿನಲ್ಲಿ ಇತ್ತಾ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಬಸ್ ನಿಲ್ದಾಣದಲ್ಲಿ ಇದ್ದ ಬೋರವೆಲ್ಲನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯು ಘಟನೆಯಾಯಿತು ಎನ್ನುವ ಸಂದರ್ಭದಲ್ಲಿ ತಾವು ಎಲ್ಲಿ ಇದ್ದರು ಎಂದು ನಿಮ್ಮ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಬಸ್ ಡಿಪೋದಲ್ಲೂ ಸಹ ಜಗಳವಾಗಿದ್ದು, ಬಸ್ ನಿಲ್ದಾಣದಲ್ಲೂ ಜಗಳವಾಗಿತ್ತು ಎಂದು ನುಡಿಯುತ್ತಾರೆ. ಬಸ್ ನಿಲ್ದಾಣದಲ್ಲಿ ಎಲ್ಲಿ ಜಗಳವಾಗಿತ್ತು ಎಂದು ಫಿರ್ಯಾದಿಯವರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಬಸ್ ನಿಲ್ದಾಣದಲ್ಲಿ ಆಗಿದ್ದು, ಆದರೆ ಯಾವ ಜಾಗದಲ್ಲಿ ಗಲಾಟೆಯಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನೀವು ದೋಷಾರೋಪಣಾ ಪಟ್ಟಿಯ ಜೊತೆಗೆ ಹಾಜರುಪಡಸಿದ ಎಲ್ಲ ದಾಖಲಾತಿಗಳು ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದರಿಂದ ನಿಮಗೆ ಏನೂ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಕಂಟ್ರೋಲರ ಕೊಠಡಿಯು ನೀವು ಬಸ್ ನಿಲ್ದಾಣಕ್ಕೆ ಹೋದಾಗ ಬಸ್ ನಿಲ್ದಾಣದ ಯಾವ ದಿಕ್ಕಿಗೆ ಇತ್ತು ಎಂದರೆ ಸಾಕ್ಷಿಯು ಸರಿಯಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲಾತಿಯನ್ನು ನೋಡಿಯೂ ಸಹ ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಜೈ ಹಿಂದ್ ಹೈಸ್ಕೂಲ್ ಬಸ್ ನಿಲ್ದಾಣದ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನೀವು ಪಂಚರು ಮತ್ತು ಉಳಿದ ಸಾಕ್ಷಿದಾರರು ಎಂದು ತೋರಿಸಿದ ಸಾಕ್ಷಿದಾರರು ಎಲ್ಲರೂ ಸಹ ಎನ್ ಡಬ್ಲ್ಯೂ ಕೆ ಎಸ್ ಆರ್ ಟಿ ಸಿ ಯ ಸಿಬ್ಬಂದಿಗಳು ಎಂದರೆ ಸರಿ. ಬಸ್ ಡಿಪೋದ ಮುಂದೆ ಆಗೇರ ಮತ್ತು ಕೋಮಾರ ಪಂಥ ಸಮುದಾಯಕ್ಕೆ ಸಂಬಂಧಪಟ್ಟವರ ಮನೆ ಹಾಗೂ ಕೆ ವಿ ನಾಯಕ ಇವರು ಮನೆ ಹಾಗೂ ಅಪಾರ್ಟಮೆಂಟ್ ಸಹ ಇರುತ್ತದೆ ಎಂದರೆ ಸರಿ. ಅದೇ ರಸ್ತೆಯಲ್ಲಿ ಸಾಕಷ್ಟು ಜನ ವಾಸ್ತವ್ಯ

ಮಾಡುತ್ತಿದ್ದು, ಸದೇ ರೀತಿ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ. ಅದೇ ರೀತಿ ಬಸ್ ನಿಲ್ದಾಣದಲ್ಲಿ ಸಾಕಷ್ಟು ಜನರು ಬಂದು ಹೋಗುವುದು ಮಾಡುತ್ತಾರೆ ಎಂದರೆ ಸರಿ. ಈ ಪ್ರರಕಣದಲ್ಲಿ ಆರೋಪಿಯ ಕುರಿತಾಗಿ ಕರ್ತವ್ಯ ತಡೆ ಆದೇಶ ಬಂದಿರುವುದನ್ನು ನೀವೇನಾದರೂ ಪಡೆದುಕೊಂಡಿರುತ್ತೀರಾ ಅಥವಾ ಇಲ್ಲವಾ ಎಂದರೆ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯವರು ತನ್ನ ಫಿರ್ಯಾದಿಯಲ್ಲಿ ಆರೋಪಿಗೆ ಕರ್ತವ್ಯ ತಡೆ ಆದೇಶ ಬಂದಿದ್ದರಿಂದ ಸಿಟ್ಟು ಬಂದಿರುತ್ತದೆ ಎಂದು ನಮೂದು ಮಾಡಿದ್ದು, ಅದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಕರ್ತವ್ಯ ತಡೆ ಆದೇಶವನ್ನು ಒದಗಿಸಿ ಎಂದು ವಿಭಾಗೀಯ ಅಧಿಕಾರಿಗಳಿಗೆ ಅಥವಾ ಕೆ ಎಸ್ ಆರ್ ಟಿ ಸಿ ಯ ಮೇಲಾಧಿಕಾರಿಗಳಿಗೆ ನಿವೇದನೆಯನ್ನು ಏನಾದರೂ ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಟ್ಟಂತೆ ಆರೋಪಿಗೆ ಕರ್ತವ್ಯ ತಡೆ ಆದೇಶ ಆಗಿತ್ತಾ ಅಥವಾ ಇಲ್ಲವಾ ಎಂದು ನಿಮ್ಮ ತನಿಖೆಯಲ್ಲಿ ದೃಢಪಟ್ಟಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯಲ್ಲಿ ಬರೆದಂತಹ ಅಂಶಗಳು ಸತ್ಯವಾಗಿದೆಯಾ ಅಥವಾ ಸುಳ್ಳಾಗಿವೆಯಾ ಎಂದು ನೀವು ನಿಮ್ಮ ತನಿಖೆಯಲ್ಲಿ ದೃಢಪಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ದೃಢಪಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಕರ್ತವ್ಯ ತಡೆ ಆದೇಶ ಇದ್ದಿದ್ದರಿಂದ ಸಿಟ್ಟು ಬಂದಿರುತ್ತದೆ ಎಂದು ಕಂಡುಬಂದಿರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ತನಿಖೆಯಲ್ಲಿ ಕರ್ತವ್ಯ ತಡೆ ಆದೇಶದ ಪ್ರತಿ ಸಿಕ್ಕಿದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿಗೆ ಕಾರಣ ಕೇಳಿ ನೋಟೀಸು ಬೇರೆ ಹಾಗೂ ಕರ್ತವ್ಯ ತಡೆ ಆದೇಶ ಬೇರೆ ಆಗಿದ್ದು, ಅದನ್ನು

ಏನಾದರೂ ತನಿಖೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕರ್ತವ್ಯದ ದೃಢೀಕರಣ ಪತ್ರವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಆರೋಪಿಯು ಹಾಗೂ ನೊಂದವರು ಕರ್ತವ್ಯಕ್ಕೆ ಹಾಜರಿದ್ದರು ಎಂದುಯಾವ ಆಧಾರದ ಮೇಲೆ ದೃಢಪಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ದೃಢೀಕರಣ ಪತ್ರದ ಮೇರೆಗೆ ದೃಢಪಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿದ ದೃಢೀಕರಣ ಪತ್ರವು ಚಾಸಾ–1 ರವರು ಕೊಟ್ಟಿರುವ ದೃಢೀಕರಣ ಪತ್ರ ಎಂದರೆ ಸಾಕ್ಷಿಯು ವಿಭಾಗೀಯ ನಿಯಂತ್ರನಾಧಿಕಾರಿಗಳು ಕೊಟ್ಟಂತಹ ಪತ್ರಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಆರೋಪಿಗೆ ನೀಡಿದ ಚಾರ್ಜಶೀಟ್ ನಲ್ಲಿ ಚಾಸಾ–1 ರವರು ದೃಢೀಕರಿಸಿಕೊಟ್ಟ ದೃಢೀಕರಣ ಪತ್ರವನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಘಟಕ ವ್ಯವಸ್ಥಾಪಕರಿಂದ ಹಾಗೂ ವಿಭಾಗೀಯ ನಿಯಂತ್ರನಾಧಿಕಾರಿಗಳಿಂದ ಯಾವ ದಿನ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ದಿಃ28–08–2018 ರಂದು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ವಿಭಾಗೀಯ ನಿಯಂತ್ರನಾಧಿಕಾರಿಗಳು ನೀಡಿದ್ದಾರೆ ಎನ್ನುವ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅವರು ಯಾವ ದಾಖಲಾತಿಗಳನ್ನು ನೋಡಿ ದೃಢೀಕರಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ನಿವೇದನೆಯ ಮೇರೆಗೆ ಹಾಗೂ ಡ್ಯೂಟಿ ಬುಕ್ ನೋಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಈ ಪ್ರಕರಣದಲ್ಲಿ ಎಷ್ಟು ದೃಢೀಕರಣ ಪತ್ರಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು 3 ದೃಢೀಕರಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಮೂರು ದೃಢೀಕರಣ ಪತ್ರಗಳನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು 1 ದೃಢೀಕರಣ ಪತ್ರವನ್ನು ಚಾಸಾ–1 ರವರು

ನೀಡಿದ್ದು, ಇನ್ನೆರಡು ದೃಡೀಕರಣ ಪತ್ರವನ್ನು ಚಾಸಾ-6 ಮತ್ತು 7 ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಇವುಗಳನ್ನು ಪಡೆದುಕೊಳ್ಳಲು ಯಾವ ದಿನಾಂಕದಂದು ನಿವೇದನೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ದಿಃ13-08-2018 ರಂದು ವಿಭಾಗೀಯ ನಿಯಂತ್ರನಾಧಿಕಾರಿಗಳಿಗೆ ನಿವೇದನೆ ಕೊಟ್ಟಿರುತ್ತೇನೆ. ಆರೋಪಿಗೆ ದೋಷಾರೋಪಣಾ ಪಟ್ಟಿಯ ಜೊತೆಗೆ ನೀಡಿದಂತಹ ಪ್ರತಿಯಲ್ಲಿ ಚಾಸಾ-1 ರವರೇ ನೀಡಿರುತ್ತಾರೆ ಎಂದು ಕೊಡಲಾಗಿದೆ ಎಂದರೆ ಸರಿ. ನಿಮ್ಮಲ್ಲಿರುವಂತಹ ದಾಖಲೆಗಳ ಪ್ರಕಾರ ಹೋದರೆ ಒಟ್ಟು 4 ದೃಢೀಕರಣ ಪತ್ರಗಳನ್ನು ಇಟ್ಟುಕೊಂಡಿರುತ್ತೀರಿ ಎಂದರೆ ಸರಿ. ಈ ಎಲ್ಲ ದೃಢೀಕರಣ ಪತ್ರಗಳನ್ನು ನೀವು ಹಾಗೂ ನಿಮ್ಮ ಮೇಲಾಧಿಕಾರಿಗಳು ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದರಿಂದ ಸದರಿ ದೃಢೀಕರಣ ಪತ್ರಗಳನ್ನು ಯಾವ ಆಧಾರದ ಮೇಲೆ ಕೊಡಲಾಗಿದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದೃಢೀಕರಣ ಪತ್ರಗಳಲ್ಲಿ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿ ದೃಢೀಕರಿಸಲಾಗಿದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನೀವು ಬಸ್ ಡಿಪೋಗೆ ಹೋಗಿ ಪಂಚನಾಮೆಗೆ ಹೋಗಿ, ತನಿಖೆಯನ್ನು ಮಾಡಿರುತ್ತೇನೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳಿಕೆಯನ್ನು ಕೊಟ್ಟಿದ್ದು, ಆದರೆ ನೀವು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ30-07-2018 ರಂದು ಹಾಗೂ ದಿಃ31-07-2018 ರಂದು ಚಾಸಾ-6 ಮತ್ತು 7 ರವರ ಜೊತೆಗೆ ಆರೋಪಿಯು ಜಗಳ ಮಾಡಿರುತ್ತಾನೆ ಎಂದು ಅವರಿಂದ ವರದಿಯ ಪ್ರತಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ತನಿಖಾವಧಿಯಲ್ಲಿ ನೀವು ಪಡೆದುಕೊಂಡ ದಾಖಲಾತಿಗಳ ಆಧಾರದ ಮೇಲೆ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ

ಸರಿಯಲ್ಲ. ನೀವು ಹೇಳಿದ ನಿಮ್ಮ ಮೇಲಾಧಿಕಾರಿಗಳು ಕೊಟ್ಟಂತಹ ದಾಖಲಾತಿಯು ಯಾವ ಕಾರಣಕ್ಕಾಗಿ ಕೊಟ್ಟಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಪಂಚನಾಮೆ ಹಾಗೂ ಹೇಳಿಕೆಗಳನ್ನು ನೀವೇ ಸೃಷ್ಟಿ ಮಾಡಿಕೊಂಡಿದ್ದು, ನೀವು ಘಟನಾ ಸ್ಥಳಕ್ಕೆ ಹೋಗಿ ಯಾವುದೇ ಪಂಚನಾಮೆಯನ್ನು ಮಾಡಿದ್ದೇ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ಮತ್ತು ಶಿವಕುಮಾರ ಎಂಬುವವರ ಮಧ್ಯ ಘರ್ಷಣೆಯಾಗಿದ್ದ ಸಂದರ್ಭದಲ್ಲಿ ಆರೋಪಿಯು ಚಾಸಾ–1 ರವರ ಪರವಾಗಿ ಸಹಿಯನ್ನು ಮಾಡಿರುವುದಿಲ್ಲ ಎಂಬ ಉದ್ದೇಶದಿಂದ ಚಾಸಾ–1 ರವರು ಆರೋಪಿಯ ವಿರುದ್ಧ ತಮ್ಮ ಇಲಾಖೆಯ ಸಿಬ್ಬಂದಿಗಳನವ್ನ ಉಪಯೋಗಿಸಿಕೊಂಡು ಪ್ರಕರಣ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನಿಮ್ಮ ತನಿಖಾವಧಿಯಲ್ಲಿ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತನಿಖೆಯಲ್ಲಿ ಆ ರೀತಿ ಕಂಡುಬಂದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಡಿಸೇಲ್ ಅವ್ಯವಹಾರದ ಬಗ್ಗೆ ಆರೋಪಿಯು ಯುನಿಯನ್ ಇವರಿಗೆ ಹೇಳುತ್ತಿದ್ದು, ಆದ್ದರಿಂದ ಚಾಸಾ–1,6 ಮತ್ತು 7 ರವರಿಗೆ ತೊಂದರೆಯಾಗಿದ್ದರಿಂದ ಆ ಸಿಟ್ಟಿನ ಮೇಲೆ ಆರೋಪಿಯ ವಿರುದ್ಧ ಈ ರೀತಿ ಸುಳ್ಳು ಫಿರ್ಯಾದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ನಮೂದು ಆದ ಹಾಗ ಯಾವ ಬಸ್ಸನ್ನು ಸರಿಯಾಗಿ ಆರೋಪಿಯು ಓಡಿಸುತ್ತಿರಲಿಲ್ಲ ಹಾಗೂ ಯಾವ ಬಸ್ಸನ್ನು ಆತನು ಡಿಸೇಲನ್ನು ಹೆಚ್ಚು ಖರ್ಚು ಮಾಡಿ ಕಿ.ಮೀ ನಲ್ಲಿ ಕಡಿಮೆ ತರುತ್ತಿದ್ದ ಎಂದು ತನಿಖೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಂದೆ ಯಾವುದೇ ಸಾಕ್ಷಿದಾರರು ಆರೋಪಿ ತಪ್ಪಿನಿಂದ ಈ ಘಟನೆಯಾಗಿದೆ ಎಂದು ಹೇಳಿಕೆಯನ್ನು ಕೊಟ್ಟಿರುವುದಿಲ್ಲ, ನೀವೇ ಅವುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ಪಂಚನಾಮೆ ಮೇಲೆ ಸಹಿ

ಮಾಡಿದ್ದಾರೆ ಎಂಬ ಸಾಕ್ಷಿದಾರರು ಸ್ಥಳದಲ್ಲಿ ಸಹಿ ಮಾಡಿದ್ದು ಇರುವುದಿಲ್ಲ, ಬದಲಾಗಿ ಠಾಣೆಗೆ ಕರೆಸಿಕೊಂಡು ಸಹಿಯನ್ನು ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಸದರಿ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಮಾಡಿದ್ದೇ ಇರುವುದಿಲ್ಲ. ಹಾಗೂ ನಿಮಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ನೀವು ನಿಮ್ಮ ಮೇಲಾಧಿಕಾರಿಗಳು ತೋರಿಸಿದ ದಾಖಲಾತಿಗಳ ಆಧಾರದ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯು ಚಾಸಾ–1,6 ಮತ್ತು 7 ರವರಿಗೆ ಯಾವುದೇ ಕಾಲದಲ್ಲೂ ಸಹ ಅವರ ಕತರ್ವ್ಯಕ್ಕೆ ಅಡ್ಡಿಪಡಿಸಿದ್ದು ಇರುವುದಿಲ್ಲ, ಈ ವಿಷಯ ನಿಮ್ಮ ತನಿಖಾ ವಧಿಯಲ್ಲಿ ಗೊತ್ತಿದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.